**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬಾಗೇಪಲ್ಲಿ.**

**ಸಿ.ಸಿ. ಸಂಖ್ಯೆ:59/2015**

| | |
|---|---|
| ಫ್ರಾಸಾ | 17 |
| ಚಾಸಾ | 17 |

**ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ** 08.01.2026.

ಸಾಕ್ಷಿಯ ಹೆಸರು : ಎಸ್. ಎನ್. ನರಸಿಂಹನಾಯ್ಡು
ತಂದೆಯ/ಗಂಡನ ಹೆಸರು : ಲಕ್ಷಪ್ಪ
ವಯಸ್ಸು : 34 ವರ್ಷ
ಉದ್ಯೋಗ : ಕೃಷಿ
ವಾಸಸ್ಥಳ : ಸಂಜೀವರಾಯನ ಹಳ್ಳಿ

(**ಆರೋಪಿಯು ಗೈರುಹಾಜರಿದ್ದು, ಆರೋಪಿ ಪರ ವಕೀಲರು ಆರೋಪಿಯ ಗುರುತು ಪತ್ತೆಗೆ ತಕರಾರು ಇಲ್ಲವೆಂದು ನುಡಿದಿದ್ದು, ಆದುದರಿಂದ ಸಾಕ್ಷ್ಯ ವಿಚಾರಣೆಗೆ ಅನುಮತಿ ನೀಡಲಾಯಿತು.**)

**ಮುಖ್ಯ ವಿಚಾರಣೆ : ಸ.ಸ.ಅ. ರವರಿಂದಃ**

ಈ ಹಂತದಲ್ಲಿ ಸಾಕ್ಷಿಗೆ ನಿಪಿ-10 ರಂತೆ ಶವ ತನಿಖಾ ವರದಿ ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದರು. ಸದರಿ ಸಹಿಯನ್ನು ದಿನಾಂಕ 05.02.2014 ರಂದು ಬಾಗೇಪಲ್ಲಿ ಸರ್ಕಾರಿ ಆಸ್ಪತ್ರೆಯ ಬಳಿ ರಾತ್ರಿ 7.30 ಸಮಯದಲ್ಲಿ ಮೃತ ನಟರಾಜ್ ರವರ ಶವ ಪಂಚನಾಮೆಯ ವೇಳೆ ಮಾಡಿರುವುದಾಗಿ ನುಡಿಯುತ್ತಾರೆ. ನನ್ನ ಜೊತೆ ಚಾಸಾ-15,16 ಮತ್ತು ಚಾಸಾ-21 ರವರು ಸಹಿ ಮಾಡಿದರು ಎಂದು ನುಡಿಯುತ್ತಾರೆ.

ನಟರಾಜ್ ರವರಿಗೆ ಚಿತ್ರಾವತಿಯ ಬಳಿ ದಿನಾಂಕ 05.02.2014 ರಂದು ಅಪಘಾತವಾಗಿತ್ತು ಎಂದು ನುಡಿಯುತ್ತಾರೆ. ಅಪಘಾತದಿಂದ ನಟರಾಜ್ ರವರ ತಲೆಗೆ ಗಾಯವಾಗಿತ್ತು ಎಂದು ನುಡಿಯುತ್ತಾರೆ. ನಟರಾಜ್ ರವರಿಗೆ ಬಾಗೇಪಲ್ಲಿ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿದ ನಂತರ ಬೆಂಗಳೂರಿನ ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಹೋಗಿದ್ದರು ಎಂದು

ನುಡಿಯುತ್ತಾರೆ. ನಟರಾಜ್ ರವರು ಎಂ.ಎಸ್. ರಾಮಯ್ಯ ಆಸ್ಪತ್ರೆಯಲ್ಲಿ 3 ವರ್ಷಗಳ ಕಾಲ ಕೋಮದಲ್ಲಿ ಇದ್ದರು. ಆ ನಂತರ ಮೃತರಾದರು ಎಂದು ನುಡಿಯತ್ತಾರೆ.

**(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ. ರವರು ಅನುಮತಿಯನ್ನು ಕೋರಿದ್ದು ನೀಡಲಾಯಿತು).**

**ಪಾಟೀ ಸವಾಲುಃ ಸ.ಸ.ಅ. ರವರಿಂದಃ**

ನಿಪಿ-14 ಕ್ಕೆ ದಿನಾಂಕ 24.11.2017 ರಂದು ಸಮಯ ರಾತ್ರಿ 2.30 ರಲ್ಲಿ ಬಾಗೇಪಲ್ಲಿ ಸರ್ಕಾರಿ ಆಸ್ಪತ್ರೆಯಲ್ಲಿ ಮೃತ ನಟರಾಜ್ ರವರ ಶವ ಪಂಚನಾಮೆಯ ವೇಳೆ ಮಾಡಿದ್ದೇನೆ ಎಂದರೆ ಸರಿ. ದಿನಾಂಕ 05.04.2017 ರಂದು ನಟರಾಜ್ ರವರಿಗೆ ಅಪಘಾತವಾಗಿದೆ ಎಂದರೆ ಸರಿ.

**ಪಾಟೀ ಸವಾಲು : ಶ್ರೀ ಕೆ.ಎಸ್. ಆರ್. ವಕೀಲರಿಂದ, ಆರೋಪಿ ಪರವಾಗಿಃ**

ಶವ ಪಂಚನಾಮೆ ನಡೆದಾಗ ನಾನು ಆಸ್ಪತ್ರೆಯ ಬಳಿ ಇದ್ದೆ. ಆಸ್ಪತ್ರೆಯ ಬಳಿ ಬರುವಂತೆ ನನ್ನ ಅಣ್ಣನಾದ ಚಾಸಾ-14 ರವರು ತಿಳಿಸಿದ್ದರು. ಸುಮಾರು 25 ಜನ ಸೇರಿದ್ದರು. ಅವರು ನಮ್ಮ ಊರಿನ ಮತ್ತು ಪಕ್ಕದ ಊರಿನವರಾಗಿದ್ದರು. ನಟರಾಜ್ ರವರು ಎಂ.ಎಸ್. ರಾಮಯ್ಯ ಆಸ್ಪತ್ರೆಯಲ್ಲಿ ಮೃತರಾದರು. ಮೃತ ದೇಹವನ್ನು ಚಾಸಾ-15 ಮತ್ತು 21 ರವರು ಎಂ.ಎಸ್. ರಾಮಯ್ಯ ಆಸ್ಪತ್ರೆಯಿಂದ ಬಾಗೇಪಲ್ಲಿ ಆಸ್ಪತ್ರೆಗೆ ತೆಗೆದುಕೊಂಡು ಬಂದಿದ್ದರು. ನಟರಾಜ್ ರವರು ಎಂ.ಎಸ್. ರಾಮಯ್ಯ ಆಸ್ಪತ್ರೆಯಲ್ಲಿ ಮೂರು ವರ್ಷಗಳ ಕಾಲ ಚಿಕಿತ್ಸೆ ಪಡೆದಿದ್ದಾರೆ ಎಂದು ಚಾಸಾ-15 ಮತ್ತು 21 ರವರು ತಿಳಿಸಿದ್ದರು.

ಪಂಚನಾಮೆಗೆ ಸಹಿ ಮಾಡಲು ಚಾಸಾ-14 ರವರು ತಿಳಿಸಿದ್ದರು. ಅವರೂ ಸಹ ಪಂಚನಾಮೆಗೆ ಸಹಿ ಮಾಡಿದ್ದರು. ಪಂಚನಾಮೆಯನ್ನು ಪೊಲೀಸರು ಬರವಣಿಗೆ ಮಾಡಿದ್ದರು. ಅಪಘಾತ ವಾಗಿರುವುದು ರಾತ್ರಿ 8 ಗಂಟೆಗೆ ತಿಳಿದಿತ್ತು. ನಾನು ಅಪಘಾತ ಸ್ಥಳಕ್ಕೆ 8 ಗಂಟೆ 2 ನಿಮಿಷಕ್ಕೆ ಹೋಗಿದ್ದೆ. ಹಂಪಸಂದ್ರದಿಂದ ನಮ್ಮ ಊರಿಗೆ ಎರಡು ಕಿಲೋಮೀಟರ್ ಅಂತರವಿದೆ. ಅಪಘಾತವು ಚಿತ್ರಾವತಿ ಡ್ಯಾಂ ನಿಂದ 200 ಮೀಟರ್ ಅಂತರಲ್ಲಿ ನಡೆದಿತ್ತು.

ಅಪಘಾತ ಸ್ಥಳದಿಂದ ಗಾಯಾಳು ನಟರಾಜ್ ನನ್ನು ದ್ವಿಚಕ್ರ ವಾಹನದಲ್ಲಿ ಕರೆದು ತರಲಾಯಿತು ಎಂದು ನುಡಿದು, ಆ ನಂತರ ಆಟೋ ಮೂಲಕ ನಟರಾಜ್ ನನ್ನು ಬಾಗೇಪಲ್ಲಿ ಸರ್ಕರಿ ಆಸ್ಪತ್ರೆಗೆ ಕರೆದುಕೊಂಡು ಬರಲಾಯಿತು ಎಂದು ನುಡಿಯುತ್ತಾರೆ. ಬಾಗೇಪಲ್ಲಿ ಸರ್ಕಾರಿ ಆಸ್ಪತ್ರೆಯಲ್ಲಿ ಅರ್ಧ ತಾಸು ಇದ್ದು, ಆ ನಂತರ ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ನಾನು, ಚಾಸಾ-15 ಮತ್ತು 21 ರವರು ನಟರಾಜ್ ರವರನ್ನು ಆಂಬುಲೆನ್ಸ್

ನಲ್ಲಿ ಕರೆದುಕೊಂಡು ಹೋದೆವು. ಬಾಗೇಪಲ್ಲಿ ಸರ್ಕಾರಿ ಆಸ್ಪತ್ರೆಯಲ್ಲಿ ನಟರಾಜ್ ರವರಿಗೆ ಚಿಕಿತ್ಸೆ ನೀಡಿದ್ದರು ಎಂದು ನುಡಿಯುತ್ತಾರೆ. ವೈದ್ಯರ ಹೆಸರು ಗೊತ್ತಿಲ್ಲ.

ನಾನು ಯಾವುದೇ ಅಪಘಾತ ನೋಡಿಲ್ಲ, ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ನಾವು ನಟರಾಜ್ ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಚಾಸಾ-18 ಮತ್ತು 19 ರವರು ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ

ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಬಾಗೇಪಲ್ಲಿ.